39	ಕೊಲ್ಲೂರು ಏತ	0.39
40	ಬಳ್ಳಾರಿ ನಾಲಾ	1.91
41	ಭೀಮ ಬ್ಯಾರೇಜ್	5.00
42	ಕಾಗ್ನ	2.00
43	ಸೋಂತಿ	4.00
44	ಗುಡ್ಡದ ಮಲ್ಲಾಪುರ	1.00
45	ಭದ್ರಾ ಮೇಲ್ದಂಡೆ	10.00
46	ಸಣ್ಣ ನೀರಾವರಿ	87.15
47	ಬೆಣ್ಣಿಹಳ್ಳ	1.80
48	ಕೆ.ಆರ್.ಬಿ.ಸಿ.ಯ 36ನೇ ಕಿಮೀ ಏತ ನೀರಾವರಿ	0.30
49	ಗೋಕಾಕ್ ಕೆನಾಲ್	1.40
50	ಅರೆಶಂಕರ್	0.20
51	ಚಿತವಾಡಗಿ	0.10
52	ಕಲಾಸ್‌ಕೋಪ್	0.14
53	ಕೊಲ್ಟಿವಿಯರ್	0.70
54	ನಾಗತಾಣ	0.12
55	ರಾಮನಹಳ್ಳಿ	0.32
56	ಭದ್ರಾ ಅಣೆಕಟ್ಟು	3.10
57	ತುಂಗಾ ಅಣೆಕಟ್ಟು	11.50
58	ವಿಜಯನಗರ ಕಾಲುವೆ	12.05
59	ಅಂಜನಾಪುರ	2.50
60	ವಾಣಿವಿಲಾಸ್ ಸಾಗರ	5.25
61	ನಾರಾಯಣಪುರ	0.74
62	ಕೈಗಾರಿಕಾ ಉಪಯೋಗಕ್ಕಾಗಿ	0.50
63	ಗೃಹಕೃತ್ಯ ಉಪಯೋಗಕ್ಕಾಗಿ	1.50
64	ಚೆನ್ನೈಗೆ ನೀರಿನ ಸರಬರಾಜು	5.00
	ಒಟ್ಟು	**734.00**

301(223) ಶ್ರೀ ಪಾಪರೆಡ್ಡಿ ಎ. (ರಾಯಚೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜಚೂರು ನಗರಸಭೆಯಲ್ಲಿ ಅಭಿವೃದ್ಧಿ ಶುಲ್ಕಗಳಿಗೆ ಸಂಬಂಧಿಸಿದಂತೆ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ?

ಇ) ಅವ್ಯವಹಾರ ನಡೆದದ್ದು ನಿಜವಾದರೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಇಲಾಖೆಯಿಂದ ಲೆಕ್ಕಪತ್ರಗಳ ಪರಿಶೋಧನೆ ಬಗ್ಗೆ ತನಿಕೆ ನಡೆಸಲು ಈಗಾಗಲೇ ಆದೇಶಿಸಲಾಗಿದೆ. ಜೊತೆಗೆ ಪೌರಾಡಳಿತ ನಿರ್ದೇಶನಾಲಯದ ಅಧಿಕಾರಿಗಳ ತಂಡದವರಿಂದ ತನಿಖೆಯನ್ನು ನಡೆಸಲಾಗಿದೆ. ತನಿಖಾ ವರದಿಯು ಪರಿಶೀಲನೆಯಲ್ಲಿದೆ.

ಇ) ತನಿಖಾ ತಂಡವು ಸಲ್ಲಿಸಿರುವ ವರದಿಯು ಪರಿಶೀಲನೆಯಲ್ಲಿದ್ದು, ಅವ್ಯವಹಾರಗಳಿಗೆ ಕಾರಣ ಕರ್ತರಾದ ತಪ್ಪಿತಸ್ಥರನ್ನು ಗುರ್ತಿಸಿ ಅಂಥವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವು.

302(442) ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪೊಲೀಸ್ ಪೇದೆಗಳ ನೇಮಕಾತಿಯಲ್ಲಿ ಹಾಲಿ ಅನುಸರಿಸುತ್ತಿರುವ ಸಿ.ಇ.ಟಿ. ಮಾರ್ಗಸೂಚಿಗಳಿಂದ ಗ್ರಾಮೀಣ ಅಭ್ಯರ್ಥಿಗಳಿಗೆ ವಂಚನೆಯಾಗುವುದಿಲ್ಲವೆ ;

ಆ) ಸಿ.ಇ.ಟಿ. ಮಾರ್ಗಸೂಚಿಯನ್ವಯ ಪೊಲೀಸ್ ಪೇದೆಗಳ ಹುದ್ದೆಗೆ ದೈಹಿಕ ಸದೃಢತೆ ಇರದ ಕೇವಲ ಬುದ್ಧಿವಂತಿಕೆ ಇರುವ ನಗರ ಪ್ರದೇಶದ ಯುವಕರು ಆಯ್ಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ಮಾರ್ಗಸೂಚಿಯನ್ನು ಬದಲಾಯಿಸುವ ನಿಲುವು ಸರ್ಕಾರಕ್ಕೆ ಇದೆಯೇ ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಸಾಮಾನ್ಯ ಲಿಖಿತ ಪರೀಕ್ಷೆ ಮಾರ್ಗಸೂಚಿ ಆಯ್ಕೆಯಿಂದ ಗ್ರಾಮೀಣ ಅಭ್ಯರ್ಥಿಗಳಿಗೆ ಪೊಲೀಸ್ ಪೇದೆಗಳ ನೇಮಕಾತಿಯಲ್ಲಿ ಯಾವುದೇ ವಂಚನೆಯಾಗುವುದಿಲ್ಲ.

ಆ) ಬಂದಿದೆ. ಅವರು ಅರ್ಹತೆ ಮತ್ತು ಅವರಿಗೆ ನೀಡಿರುವ ಮೀಸಲಾತಿ ಆಧಾರದ ಮೇಲೆ ಗ್ರಾಮೀಣ ಅಭ್ಯರ್ಥಿಗಳನ್ನೂ ಸಹ ಆಯ್ಕೆ ಮಾಡಲಾಗುತ್ತಿದೆ.

ಇ) ಇಲ್ಲ

303(445) ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ಪಟ್ಟಣ ಪಂಚಾಯತಿಗೆ ನಾಮನಿರ್ದೇಶನ ಸದಸ್ಯರ ನೇಮಕ ಮಾಡಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಸದಸ್ಯರ ನೇಮಕಾತಿ ವಿಳಂಬವಾಗಲು ಕಾರಣವೇನು ?

ಇ) ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು ?